**<u>3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು</u>**

**ಸಿ.ಸಿ.ನಂ.542/2019**

**ದಿನಾಂಕಃ05-03-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

ಪಿ.ಡಬ್ಲ್ಯುಃ3 ಸಿ.ಡಬ್ಲ್ಯುಃ5

| | |
|---|---|
| ಸಾಕ್ಷಿಯ ಹೆಸರು | ಃ ನರಸಿಂಹಪ್ಪ |
| ತಂದೆಯ ಹೆಸರು | ಃ ಹನುಮಪ್ಪ |
| ವಯಸ್ಸು | ಃ 59 ವರ್ಷ |
| ಉದ್ಯೋಗ | ಃ ವ್ಯಾಪಾರ |
| ವಾಸ | ಃ ಜೋಡಿತಿಮ್ಮಾಪುರ |

**<u>ಮುಖ್ಯ ವಿಚಾರಣೆಃ ಮಾನ್ಯ ಹಿಸಸಅ ಅವರಿಂದಃ</u>**

ನಾನು ಜೋಡಿತಿಮ್ಮಾಪುರ ರೈಲ್ವೆ ಗೇಟ್ ನ ಬಳಿ ಟೀ ಅಂಗಡಿ ವ್ಯಾಪಾರ ನಡೆಸುತ್ತೇನೆ. ಮೃತ ಕಾಂತರಾಜುರವರು ಗೊತ್ತು. ದಿಃ24-08-2017 ರಂದು ಸಂಜೆ 6.00 ಗಂಟೆ ಸಮಯದಲ್ಲಿ ನಾನು ನನ್ನ ಬಾಬ್ತು ಟೀ ಅಂಗಡಿಯಲ್ಲಿದ್ದೆ. ಪಕ್ಕದಲ್ಲಿ ಬಿಜಿಎಸ್ ಶಾಲೆಯ ಹತ್ತಿರ ಬಿಹೆಚ್ ರಸ್ತೆಯಲ್ಲಿ ಕಾಂತರಾಜು ಜೋಡಿತಿಮ್ಮಾಪುರ ಕಡೆಯಿಂದ ಬೀರೂರು ಕಡೆ ಹೋಗಲು ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದರು ಆಗ ಆತನ ಹಿಂದಿನಿಂದ ಅಂದರೆ ತರೀಕೆರೆ ಕಡೆಯಿಂದ ಬೀರೂರು ಕಡೆಗೆ 10 ಚಕ್ರದ ತಮಿಳುನಾಡಿನ ಲಾರಿ ವೇಗವಾಗಿ ಬಂದು ಮೃತ ಕಾಂತರಾಜುರವರಿಗೆ ಡಿಕ್ಕಿಪಡಿಸಿತ್ತು. ತಕ್ಷಣ ನಾನು ಅಪಘಾತ ಸ್ಥಳಕ್ಕೆ ಹೋದಾಗ ಮೃತ ಕಾಂತರಾಜುರವರ ಮೈಮೇಲೆ ಲಾರಿಯ ಚಕ್ರ ಹರಿದಿತ್ತು ಮತ್ತು ಅವರ ಕಾಲುಗಳು ತುಂಡಾಗಿದ್ದವು. ನಂತರ ಕಾಂತರಾಜುರವರನ್ನು ಬೀರೂರು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ. ನಂತರ ಬೀರೂರು ಸರ್ಕಾರಿ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಆಸ್ಪತ್ರೆಗೆ ಆಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋಗುವಾಗ ತರೀಕೆರೆಯ ಬೆಟ್ಟದ ಹಳ್ಳಿ ಬಳಿ ಹೋಗುವಾಗ ಕಾಂತರಾಜುರವರು ಮೃತ ಪಟ್ಟಿರುತ್ತಾರೆಂದು ನನಗೆ ತಿಳಿದು ಬಂದಿರುತ್ತದೆ. ಸದರಿ ಅಪಘಾತವು ಲಾರಿ

ಚಾಲಕನ ತಪ್ಪಿನಿಂದ ಆಗಿರುತ್ತದೆ. ಸದರಿ ಲಾರಿ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಿದ್ದು ಆರೋಪಿತರ ವಕೀಲರ ಅರ್ಜಿ ಸಲ್ಲಿಸಿಕೊಂಡು ಗುರುತುಹಚ್ಚುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ನಿಪಿ-2 ಪೊಟೋದಲ್ಲಿ ಕಾಣುವ ಲಾರಿ ಅಪಘಾತ ಪಡಿಸಿದ ಲಾರಿ ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ವೈ.ಟಿ.ಎಂ  ವಕೀಲರಿಂದಃ-</u>

ಮೃತ ಕಾಂತರಾಜುರವರ ತಂದೆ ಚಾಸಾ-12 ಮತ್ತು ನಾನು ಸಂಬಂಧಿಕರಾಗಿದ್ದು ವಿಶ್ವಾಸದಿಂದ ಇದ್ದೇವೆಂದರೆ ಸರಿ. ನಾನು ಕಳೆದ 7 ವರ್ಷಗಳಿಂದ ತಿಮ್ಮಾಪುರದ ರೈಲ್ವೆ ಗೇಟ್ ಬಳಿ ಟೀ ಅಂಗಡಿನಡೆಸುತ್ತಿದ್ದೇನೆ. ನನ್ನ ಟೀ ಅಂಗಡಿಗೂ ತಿಮ್ಮಾಪುರ ಗೇಟ್ ಗೂ ಸುಮಾರು 50 ಅಡಿಗಳ ಅಂತರವಿದೆ. ತಿಮ್ಮಾಪುರ ರೈಲ್ವೆ ಗೇಟ್ ನ ಬಳಿ ರಸ್ತೆಗೆ ದೊಡ್ಡ ಹಂಪುಗಳನ್ನು ಹಾಕಿದ್ದಾರೆ ಎಂದರೆ ಸರಿ. ಜೋಡಿತಿಮ್ಮಾಪುರದ ಬಸ್ ನಿಲ್ದಾಣಕ್ಕೂ ಜೋಡಿತಿಮ್ಮಾಪುರದ ರೈಲ್ವೆ ಗೇಟ್ ಗೂ ಸುಮಾರು 1 ಕೀ.ಮೀ.ಅಂತರವಿದೆ. ಜೋಡಿತಿಮ್ಮಾಪುರ ಬಸ್ ನಿಲ್ದಾಣದಿಂದ ನಿಂತು ನೋಡಿದರೆ ಜೋಡಿತಿಮ್ಮಾಪುರದ ರೈಲ್ವೆ ಗೇಟ್ ಕಾಣಿಸುತ್ತದೆ ಎಂದರೆ ಸರಿ. ಅಪಘಾತವಾಗಿದೆ ಎಂದು ಹೇಳಲಾದ ಸಮಯದಲ್ಲಿ ನಾನು ಟೀ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದೆ ಎಂದರೆ ಸರಿ. ಅಪಘಾತವಾದ ಶಬ್ದಕೇಳಿ ನಾನು ಅಪಘಾತವಾದ ಕಡೆ ನೋಡಿರುತ್ತೇನೆಂದರೆ ಸರಿ. ಅಪಘಾತವಾದ ನಂತರ ಲಾರಿಯು ಸ್ವಲ್ಪ ಮುಂದೆ ಹೋಗಿ ನಿಂತುಕೊಂಡಿರುತ್ತದೆ. ನಾನು ಅಪಘಾತವಾದ ಕೂಡಲೆ ಅಪಘಾತಕ್ಕೀಡಾದ ವ್ಯಕ್ತಿಯ ಬಳಿ ಹೋಗಿದ್ದೆನು ಲಾರಿಯು ಅಲ್ಲಿಂದ ಸ್ವಲ್ಪ ಮುಂದೆ ನಿಂತಿತ್ತು. ಅಪಘಾತವಾದ ನಂತರ ಲಾರಿಯನ್ನು ಸ್ವಲ್ಪ ಮುಂದೆ ಹೋಗಿ ನಿಲ್ಲಿಸಿ ಲಾರಿ ಚಾಲಕ ಅಲ್ಲಿಂದ ಪರಾರಿಯಾಗಿದ್ದರು ಎಂದರೆ ಸರಿಯಲ್ಲ. ನಾನು ಅಪಘಾತಕ್ಕೀಡಾದವರನ್ನು ನೋಡುತ್ತಿದ್ದ ಕಾರಣ ಲಾರಿಯ ಚಾಲಕನನ್ನು ನೋಡಿಲ್ಲ ಎಂದರೆ ಸರಿಯಲ್ಲ.

ಅಪಘಾತಪಡಿಸಿದ ಲಾರಿಯಲ್ಲಿ ಎಷ್ಟು ಜನರಿದ್ದರು ಎಂದು ಹೇಳಲಾಗುವುದಿಲ್ಲ. ಆರೋಪಿಯ ಚಹರೆ ಕಪ್ಪು ಬಣ್ಣ ಮತ್ತು ಸುಮಾರು 5 ಅಡಿ ಎತ್ತರವಿದ್ದನು. ಚಾಲಕನ ಹೆಸರು ಗೊತ್ತಿಲ್ಲ. ಚಾಲಕನಿಗೆ ಅಂದಾಜು ಎಷ್ಟು ವಯಸ್ಸಾಗಿತ್ತು ಎಂದು ಹೇಳಲಾಗುವುದಿಲ್ಲ. ತಿಮ್ಮಾಪುರದ ರೈಲ್ವೆ ಗೇಟ್ ನ ಬಳಿ ರಸ್ತೆಗೆ ಹಂಪುಗಳನ್ನು ಹಾಕಿರುವ ಕಾರಣ ನಿದಾನವಾಗಿ ಬರುತ್ತವೆ ಎಂದರೆ ಸರಿ ಸಾಕ್ಷಿಯು ಮುಂದುವರೆದು ಕೆಲವರು ನಿದಾನವಾಗಿ ಬರುತ್ತಾರೆ ಕೆಲವರು ವೇಗವಾಗಿ ಬರುತ್ತಾರೆ ಎಂದು ನುಡಿಯುತ್ತಾರೆ. ಮೃತ ಕಾಂತರಾಜುವಿನ ಜೊತೆ ಬೇರೆ ಯಾರು ಹೋಗುತ್ತಿರಲಿಲ್ಲ. ಮೃತ ಕಾಂತರಾಜು ರವರು ನಿದಾನವಾಗಿ ಬರುತ್ತಿದ ಲಾರಿಗೆ ಅಡ್ಡಲಾಗಿ ವೇಗವಾಗಿ ರಸ್ತೆ ದಾಟಲು ಹೋಗಿ ಅಪಘಾತಕ್ಕಿಡಾಗಿದ್ದಾರೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಹೇಳಿಕೆಯ ಪ್ರಕಾರ ಏನು ಬರೆದುಕೊಂಡಿದ್ದಾರೆ ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ಅಪಘಾತವು ಲಾರಿಯ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಆ ದಿನ ಸದರಿ ಲಾರಿ ಚಾಲನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತ ಕಾಂತರಾಜ್ ನಮ್ಮ ಸಂಬಂಧಿಯಾದ ಕಾರಣ ಅವರಿಗೆ ಸಹಾಯಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**
**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

(ದೀಪು ಎಂ.ಟಿ.)
III ನೇ.ಹೆ.ದಿ.ನ್ಯಾ.&ಪ್ರಃದಃನ್ಯಾಃದಂ.,ರವರು,
ಕಡೂರು.